ಅಷ್ಟು ಹಣವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಕೂಡ ಈ ಸಭೆಯ ಗಮನಕ್ಕೆ ತಂದು ಅದರ ಜೊತೆಯಲ್ಲಿ ನನ್ನ ಚಿಂತನೆಯನ್ನು ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಕ್ರಮ

1953: ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 1991-92, 1992-93ನೇ ವರ್ಷಗಳಲ್ಲಿ ಸಮುದ್ರ ಕೊರೆತದಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಾವುವು, ಅದಕ್ಕೆ ತಗುಲಿದ ವೆಚ್ಚವೆಷ್ಟು;

ಆ) ಅವುಗಳಲ್ಲಿ ಅಪೂರ್ಣವಾದವು ಎಷ್ಟು ? ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ;

ಇ) 1993-94ರಲ್ಲಿ ಯಾವ ಯಾವ ಸಮುದ್ರ ಕೊರೆತ ಮಾಡಿಸಲಾಗುವ ಕಾಮಗಾರಿಗಳೆಷ್ಟು ? ಅವು ಯಾವುವು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 1991-92ರಲ್ಲಿ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. 1992-93ರಲ್ಲಿ 5 ಕಾಮಗಾರಿಗಳನ್ನು ಕೈಗೊಂಡಿದ್ದು ವಿವರವನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಆ) ಕೈಗೊಂಡಿರುವ ಎಲ್ಲ 5 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಮುಂಬರುವ ಮಳೆಗಾಲದೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಇ) ಸಮುದ್ರ ಕೊರೆತ ಮಾಡಿಸುವ ಕಾಮಗಾರಿಗಳು ಯಾವುದೂ ಇಲ್ಲ. ಆದರೆ ಸಮುದ್ರ ಕೊರೆತ ತಡೆಗೋಡೆ ನಿರ್ಮಿಸುವ 7 ಕಾಮಗಾರಿಗಳನ್ನು ಉದ್ದೇಶಿಸಲಾಗಿದೆ. ವಿವರಗಳನ್ನು ಅನುಬಂಧ ಬಿ ನಲ್ಲಿ ನೀಡಲಾಗಿದೆ.

ಅನುಬಂಧ – ಎ

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಎಸ್. ಆಚಾರ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1953ರ (ಅ) ಪ್ರಶ್ನೆಗೆ ಸಂಬಂಧಿಸಿದಂತೆ ವಿವರ.

1992–93ರಲ್ಲಿ ಬೈಂದೂರು ಕ್ಷೇತ್ರದಲ್ಲಿ ಕೈಗೊಂಡಿರುವ ಸಮುದ್ರ ರಕ್ಷಣಾ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ತಾಲ್ಲೂಕು	ಅಂದಾಜು ವೆಚ್ಚ	1992–93 ಅನುದಾನ	1992–93 ರಲ್ಲಿ ಮಾಡಲಾದ ವೆಚ್ಚ
1.	ಪಡುವರಿ ಗ್ರಾಮದ ಕೋಟೆ ಬಾಗಿಲು ಬಳಿ ಸಮುದ್ರ ಕೊರೆತ ತಡೆಗೋಡೆ ಚೈ. 60–160 ಮೀ.	ಕುಂದಾಪುರ	13.00	4.00	2.44
2.	ಕಳಿಹಿತ್ಲು ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 150–250ಮೀ.	ಕುಂದಾಪುರ	13.25	4.00	1.12
3.	ಆಳವೆಗದ್ದೆ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ.50–150 ಮೀ.	ಕುಂದಾಪುರ	13.40	4.25	3.17
4.	ಗುಜ್ಜಾಡಿ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 0–100 ಮೀ.	ಕುಂದಾಪುರ	11.65	3.50	2.80
5.	ಗುಜ್ಜಾಡಿ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 100–200 ಮೀ.	ಕುಂದಾಪುರ	13.30	4.00	5.37
		ಒಟ್ಟು:	64.60	19.75	14.90

ಅನುಬಂಧ – ಬಿ

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಎಸ್. ಆಚಾರ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1953ರ (೪) ಪ್ರಶ್ನೆಗೆ ಸಂಬಂಧಿಸಿದಂತೆ ವಿವರ.

1993–94ನೇ ಸಾಲಿನಲ್ಲಿ ಬೈಂದೂರು ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಸಮುದ್ರ ಕೊರೆತ ರಕ್ಷಣಾ ಕಾಮಗಾರಿಗಳು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ತಾಲ್ಲೂಕು	ಅಂದಾಜು ವೆಚ್ಚ	1993–94ನೇ ಸಾಲಿನ ಅನುದಾನ
1.	ಕಿರುಮಂಜೇಶ್ವರ ಹೊಸ ಹಿತ್ತಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ (100 ಮೀ.)	ಕುಂದಾಪುರ	14.00	4.25
2.	ಗಂಗೇಬೈಲು ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ (100 ಮೀ.)	ಕುಂದಾಪುರ	13.00	4.00
3.	ಕರ್ಕಿಕಾಳಿ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 125–600ರಿಂದ 125.800 ಕಿ.ಮೀ.	ಕುಂದಾಪುರ	37.50	11.25
4.	ಕರ್ಕಿಕಾಳಿ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 125.800 ರಿಂದ 126–100 ಕಿ.ಮೀ.	ಕುಂದಾಪುರ	50.00	0.10
5.	ಕೋಟೆ ಬಾಗಿಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ. ಚೈ. 131.840 ರಿಂದ 131.990 ಕಿ.ಮೀ.	ಕುಂದಾಪುರ	20.00	6.00
6.	ಕಳಿಹಿತ್ತಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 250 ರಿಂದ 675 ಮೀ.	ಕುಂದಾಪುರ	50.00	15.00
7.	ಅಳಿವೆಗದ್ದೆ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 137.115 ರಿಂದ 137.215 ಕಿ.ಮೀ.	ಕುಂದಾಪುರ	14.00	4.50
		ಒಟ್ಟು:	198.50	45.10

ಶ್ರೀ ಜಿ.ಎಸ್. ಆಚಾರ್:– ಮಾನ್ಯ ಅಧ್ಯಕ್ಷರೇ,ನನ್ನ ಕ್ಷೇತ್ರದಲ್ಲಿ ಸಮುದ್ರ ಕೊರೆತದ ಐದು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದೆ ಎನ್ನುವ ವಿಚಾರವನ್ನು ಮಂತ್ರಿಗಳು ಹೇಳಿದ್ದಾರೆ. ಆದರೆ ನನಗೆ ತಿಳಿದೆ ಹಾಗೆ ಬೈಂದೂರು, ಕುಂದಾಪುರ, ಹಾಗೂ ಬ್ರಹ್ಮಾವರ ಕ್ಷೇತ್ರಗಳಲ್ಲಿ ಕಾಮಗಾರಿಗಳಿಗೆ 39 ಲಕ್ಷ ರೂಪಾಯಿಗಳ ಪಾವತಿ ಬಾಕಿ ಇದೆ. ಈ ಹಣವನ್ನು ಮಾರ್ಚ್ ಅಂತ್ಯದೊಳಗೆ ಕೊಡುತ್ತೀರಾ ? ಮತ್ತು ಮಳೆಗಾಲದೊಳಗೆ ಆ ಕಾಮಗಾರಿ ಸಂಪೂರ್ಣವಾಗುವುದೇ ಎನ್ನುವುದು ಒಂದು. ಎರಡನೆಯದು ನನ್ನ ಪ್ರಶ್ನೆಯಲ್ಲಿ 'ಇ' ವಿಭಾಗದಲ್ಲಿ ನಾನು ಸಮುದ್ರ ಕೊರೆತ ಮಾಡಿಸುವ ಕಾಮಗಾರಿಗಳೆಷ್ಟು ಎಂದು ಕೇಳಲೇ ಇಲ್ಲ. ನನ್ನ ಕ್ಷೇತ್ರದಲ್ಲಿ ಸಮುದ್ರ ಕೊರೆತ ಆಗಲಿ, ಆದಕ್ಕೋಸ್ಕರ ಕಾಮಾಗಾರಿಯಾಗಲಿ ಎಂದು ನಾನು ಕೇಳಲಿಲ್ಲ. ಇದು ಏತಕ್ಕೆ ನಾನು ಕೇಳಿದ ಪ್ರಶ್ನೆ ತಿರುವಾಗಿ ಪ್ರಿಂಟ್ ಆಯಿತೋ ನನಗೆ ಗೊತ್ತಿಲ್ಲ. ಅಲ್ಲಿಯ ಶಾಸಕನಾಗಿ ಸಮುದ್ರದ ಕೊರೆತ ಏನು ಎಂದು ನನಗೆ ಗೊತ್ತಿದ್ದು ಸಮುದ್ರ ಕೊರೆತ ಮಾಡಿಸುವುದಕ್ಕೆ ಏನು ಕಾಮಗಾರಿ ಮಾಡುತ್ತೀರಿ ಎಂದು ಕೇಳುವಷ್ಟು ನಾನು ಮೂರ್ಖನಲ್ಲ. ಇದು ಪ್ರಶ್ನೆ ತಿರುವು ಮುರುವು ಆಗಿದೆ. ಈ ರೀತಿ ಬಂದಿದೆ. ಹೋಗಲಿ. ಅದಕ್ಕೆ ಸಮುದ್ರ ಕೊರೆತ ಮಾಡಿಸುವ ಕಾಮಗಾರಿ ನಾವು ತೆಗೆದುಕೊಳ್ಳುತ್ತಿಲ್ಲ ಎನ್ನುವ ಪ್ರಾಮಾಣಿಕ ಉತ್ತರಕೊಟ್ಟಿದ್ದಾರೆ. ಧನ್ಯವಾದಗಳು. ಆದರೆ ಮುಂದೆ ಆಗುವಂಥ ಏಳು ಕಾಮಗಾರಿಗಳು ಯಾವುದು ಇದೆ. ಆ ಕಾಮಗಾರಿಯನ್ನು ಮುಂದಿನ ವರ್ಷ ತೆಗೆದುಕೊಳ್ಳಲಾಗುವುದೇ ? ಇದಕ್ಕೆ ನನಗೆ ಬೇಕು ಸ್ಪಷ್ಟವಾದ ಉತ್ತರ.

ಡಾ।। ಆರ್.ಬಿ. ಚೌಧರಿ:– ಮಾನ್ಯ ಅಧ್ಯಕ್ಷರೇ, 39 ಲಕ್ಷ ಗ್ರಾಂಟನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳಿದ್ದೀರಿ. ಆದರ ಬಗ್ಗೆ ಆದ್ಯತೆ ಮೇರೆಗೆ ನಾವು ಗ್ರಾಂಟನ್ನು ಕೊಡುತ್ತಿದ್ದೇವೆ. ಸಮುದ್ರ ತಡೆ ಏನು ಇದೆ, ಆದಕ್ಕೆ ಗೋಡೆ ಕಟ್ಟುವ ಕಾಮಗಾರಿಗಳ ಸಲುವಾಗಿ ನಾವು ಗ್ರಾಂಟ್ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತು ಈ ಪ್ರಶ್ನೆ ತಿರುವು ಮುರುವು ಆಗಿರುವುದು ನಿಜ. ಆದರೆ ಈ ಕೆಲಸಗಳನ್ನು ಶೀಘ್ರ ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ಎಸ್. ಆಚಾರ್:– ಆದ ಕೆಲಸ ಇದೆ; ಉಳಿದದ್ದು ಆದ್ಯತೆ ಮೇಲೆ ತೆಗೆದುಕೊಳ್ಳುತ್ತೀರಿ. ಆದ ಕೆಲಸ ಇದೆ, ಅದಕ್ಕೆ ಪಾವತಿ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ.

ಡಾ।। ಆರ್. ಬಿ. ಚೌಧರಿ:– ಪಾವತಿ ಮಾಡಬೇಕಾಗುತ್ತದೆ. ಆದರ ಸಲುವಾಗಿ ಮಾಡುತ್ತೇವೆ.

ಕನಕಪುರ ತಾಲ್ಲೂಕು ಕಬ್ಬಾಳ ನಾಲಾ ಯೋಜನೆ

2216:– ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕನಕಪುರ ತಾಲ್ಲೂಕು ಕಬ್ಬಾಳ ನಾಲಾ ಯೋಜನೆಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು;

2. ಈ ಯೋಜನೆಗೆ ನಿಗದಿಪಡಿಸಿರುವ ಅವಧಿ ಎಷ್ಟು;

3. ಈ ಯೋಜನೆಯನ್ನು ಇನ್ನು ಮುಂದೆ ಈ ತಾಲ್ಲೂಕಿನಲ್ಲಿ ಮುಂದುವರಿಸುವ ಯೋಜನೆ ಸರ್ಕಾರದಲ್ಲಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–